**ಓ.ಎಸ್.ನಂಬ್ರ: 431/2023** **ಪಿ.ಡಬ್ಲ್ಯೂ:1**

ದಿನಾಂಕಃ 07-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟಿ ಸವಾಲುಃ ಶ್ರೀ ಕೆ.ಸಿ.ಎಸ್. ವಕೀಲರಿಂದ

ನಾನು ಹುಟ್ಟಿದಾಗಿನಿಂದ ಉಪ್ಪುಂದದಲ್ಲಿ ವಾಸ್ತವ್ಯವಿದ್ದೇನೆ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ, ಉಪ್ಪುಂದ ಗ್ರಾಮದ ವಿಳಾಸದಲ್ಲಿ ಇದೆ ಎಂದರೆ ಸರಿ. ನನ್ನ ತಾಯಿ 2005 ನೇ ಇಸವಿಯಲ್ಲಿ ಉಪ್ಪುಂದದಲ್ಲಿ ಮೃತರಾಗಿರುತ್ತಾರೆ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ ಮತ್ತು ಅದನ್ನು ಹಾಜರುಪಡಿಸುತ್ತೇನೆ.

2. ಶಿರೂರು ಗ್ರಾಮದ ಬೆಟ್ಟಿನ ಮನೆ ಎಂಬಲ್ಲಿ ನಾರಾಯಣ ಶೆಟ್ಟಿ ಎಂಬ ಹೆಸರಿನವರು 5 ಜನ ಇರುವುದು ಗೊತ್ತಿದೆ. ನಾನು ಹೇಳುವ ನಾರಾಯಣ ಶೆಟ್ಟಿ ಒಂದನೇ ಪ್ರತಿವಾದಿಯ ಅಣ್ಣ. ಒಂದನೇ ಪ್ರತಿವಾದಿಯ ತಾಯಿಯ ಹೆಸರು ಲಿಂಗಮ್ಮ ಶೆಡ್ತಿ, ತಂದೆಯ ಹೆಸರು ಹೇಳಲು ಸಾಧ್ಯವಿಲ್ಲ. ಲಿಂಗಮ್ಮ ಶೆಡ್ತಿಯವರಿಗೆ 4 ಜನ ಮಕ್ಕಳು. ಅವರ ಹೆಸರು ನಾರಾಯಣ ಶೆಟ್ಟಿ, ನೀಲಮ್ಮ ಶೆಡ್ತಿ, ಸಂಜೀವ ಶೆಟ್ಟಿ ಮತ್ತು ಗುಲಾಬಿ ಶೆಡ್ತಿ. ಅವರಲ್ಲಿ ನೀಲಮ್ಮ ಶೆಡ್ತಿ ತೀರಿ ಹೋಗಿರುತ್ತಾರೆ. ನಾನು ಹೇಳುವ ನಾರಾಯಣ ಶೆಟ್ಟಿ 1965 ನೇ ಇಸವಿಯಿಂದ ನಾಪತ್ತೆಯಾಗಿರುತ್ತಾರೆ ಎಂದರೆ ಸರಿಯಲ್ಲ. ನಾರಾಯಣ ಶೆಟ್ಟಿಯವರು ಶಿರೂರು ಗ್ರಾಮದಲ್ಲಿ ವಾಸ್ತವ್ಯ ಇದ್ದಿದ್ದರೆ ಅವರ ಹೆಸರು ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ ಮತ್ತು ಪಡಿತರ ಚೀಟಿಯಲ್ಲಿ ಕಂಡುಬರುತ್ತದೆ ಎಂದರೆ ಸರಿ. ನಾರಾಯಣ ಶೆಟ್ಟಿಯವರು ಶಿರೂರು ಗ್ರಾಮದ ಬೆಟ್ಟಿನ ಮನೆ ಎಂಬಲ್ಲಿ 1965 ರಿಂದ ಸಾಯುವವರೆಗೆ ವಾಸ್ತವ್ಯವಿದ್ದರು ಎಂಬ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ನಾನು ಹೇಳುವ ನಾರಾಯಣ ಶೆಟ್ಟಿಯವರೊಂದಿಗೆ ನಾನು, ನನ್ನ ತಾಯಿ, ನನ್ನ ಅಣ್ಣ ವಾಸ್ತವ್ಯವಿದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ.

3. ನಿಪಿ 7 ರಲ್ಲಿ ಕಂಡುಬರುವ ನಾರಾಯಣ ಶೆಟ್ಟಿ ಟಿ. ನಾರಾಯಣ ಶೆಟ್ಟಿ ಎಂದರೆ ಸರಿ. ಟಿ. ನಾರಾಯಣ ಶೆಟ್ಟಿ ಎಂದರೆ ತಿಮ್ಮಯ್ಯ ಶೆಟ್ಟಿಯ ಮಗ ನಾರಾಯಣ ಶೆಟ್ಟಿ, ನಿಪಿ 3 ನನ್ನ ಗಂಡನ ಕಡೆಯವರು ಪ್ರಿಂಟ್ ಮಾಡಿದ್ದಾರೆ ಎಂದು ಹೇಳಲಾಗುವ ಮದುವೆಯ ಆಮಂತ್ರಣ

ಪತ್ರಿಕೆ ಎಂದರೆ ಸರಿ. ನಮ್ಮ ಕಡೆಯವರು ಪ್ರಿಂಟ್ ಮಾಡಿರುವ ಮದುವೆಯ ಆಮಂತ್ರಣ ಪತ್ರಿಕೆ ಇದೆ ಮತ್ತು ಅದನ್ನು ಹಾಜರುಪಡಿಸಬಹುದು. ನಿಪಿ.3 ನ್ನು ಈ ದಾವೆಗಾಗಿ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 20-07-2023 ರಂದು ನಿಪಿ 9 ನ್ನು ತಯಾರಿಸಲಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಕಂಡುಬರುವ ನಾರಾಯಣ ಶೆಟ್ಟಿ ಒಂದನೇ ಪ್ರತಿವಾದಿಯ ಅಣ್ಣ ನಾರಾಯಣ ಶೆಟ್ಟಿ ಅಲ್ಲ ಎಂದರೆ ಸರಿಯಲ್ಲ.

4. ನಾನು ದ್ವಿತೀಯ ಪಿ.ಯು.ಸಿ.ಯವರೆಗೆ ಓದಿರುತ್ತೇನೆ. ದಿಃ 14-02-2017 ರಂದು ನೀಡಿರುವ ಮೃತರ ಕುಟುಂಬದ ಜೀವಂತ ಸದಸ್ಯರ ವಿವರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ನಿಸ್ಸಂತತಿ ಎಂದು ಕಾಣಿಸಿದ್ದರೆ ಅದು ಸರಿಯಲ್ಲ.

5. ನನ್ನ ತಾಯಿ ತೀರಿ ಹೋಗುವಾಗ ಅವರಿಗೆ 57 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತೀರಿ ಹೋಗುವಾಗ ಅವರಿಗೆ 76 ವರ್ಷ ವಯಸ್ಸಾಗಿತ್ತು. ನನ್ನ ತಂದೆ ದಿಃ18-03-2008 ರಲ್ಲಿ ತೀರಿ ಹೋಗಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಬಹುದು.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೈಂದೂರು